ಖಂಡಿತವಾಗಿಯೂ ಕೂಡ ಮಂತ್ರಿಗಳು ನಾವೆಲ್ಲರೂ ಕುಳಿತು ದರದ ಬಗ್ಗೆ ಏನು ಮಾಡಬೇಕು, ನಾವು ಮಾಡಿದ್ದು ತಪ್ಪಾಗಿದ್ದರೆ ನಾವು ಒಪ್ಪಿಕೊಳ್ಳತಕ್ಕ ಪ್ರಾಮಾಣಿಕತೆ ನಾವು ಮಾಡುತ್ತೇವೆ. ತಮ್ಮ ಭಾಗದಲ್ಲಿ ತಪ್ಪಾಗಿದೆ ಎಂದು ಕಂಡು ಬಂದು ಇನ್ನೂ ಹೆಚ್ಚು ಮಾಡಬೇಕೆಂದು ಅಭಿಪ್ರಾಯ ಪಟ್ಟರೆ ನೀವೂ ಒಪ್ಪಬೇಕಾಗುತ್ತದೆ. ಈ ಎರಡರಲ್ಲಿ ಒಂದು ತೀರ್ಮಾನ ಮಾಡೋಣ. ಆದ್ದರಿಂದ ಇವತ್ತು ಈ ಚರ್ಚೆಯನ್ನು ಇಷ್ಟಕ್ಕೆ ಸೀಮಿತಗೊಳಿಸಿ ಮುಂದಿನ ವ್ಯವಹಾರಗಳಿಗೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಹತ್ತಿರ ಮನವಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.)

ಶ್ರೀ ಎಂ. ವೀರಪ್ಪಮೊಯ್ಲಿ:- ಈಗ ಮೊನ್ನೆ ೪೮ ಕೋಟಿ ರೂಪಾಯಿಗಳ ನಷ್ಟವಾಯಿತು. ಈಗ ಸುಮಾರು ೪೦-೪೨ ಕೋಟಿ ರೂಪಾಯಿಗಳ ಭಾರವನ್ನು ಪುನಃ ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿದ್ದೇವೆ. About Rs.90 crores we have given them, so that they can improve their efficiency and make up. ಈ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಿದ್ದೇವೆ. ಇಲ್ಲ, ೧೬೦ ಕೋಟಿ ರೂಪಾಯಿಗಳ ಜವಾಬ್ದಾರಿ ಕೂಡ ನಮ್ಮದೇ ಎಂದು ಕೆ.ಎಸ್.ಆರ್.ಟಿ.ಸಿ. ಮೇಲೆ ನಾವು ಹೇರಿದರೆ, ನಾಳೆ ಅದು ಮುಳುಗಿದರೆ ನಾವು ನೀವು ಎಲ್ಲ ಅದಕ್ಕೆ ಭಾಗಿದಾರರಾಗಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ. ಬದುಕುವ ಬಗ್ಗೆ ದಾರಿ ನೋಡಬೇಕೇ ಹೊರತು ಅದರ ಬಾಗಿಲು ಮುಚ್ಚಸುವ ಪ್ರಯತ್ನದ ಬಗ್ಗೆ ಯೋಚನೆ ಬಹುಶಃ ನಿಮ್ಮದ್ದು ಯಾರದ್ದೂ ಆಲ್ಲವೆಂದು ನಾನು ಭಾವಿಸಿದ್ದೇನೆ. ಆ ರೀತಿ ಏನಾದರೂ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ನಿಲ್ಲಿಸಿಬಿಟ್ಟು ಯಾರಾದರೂ ಖಾಸಗಿಯವರಿಗೆ ಕೊಟ್ಟು ಲಾಭ ಮಾಡಿಕೊಳ್ಳಬೇಕೆಂಬ ಅಭಿಪ್ರಾಯ ಬಹುಶಃ ಯಾರಿಗೂ ಇಲ್ಲ. ಆದ್ದರಿಂದ ಈ ಅಭಿಪ್ರಾಯ ಸಾರ್ವಜನಿಕರಲ್ಲಿ ಕೂಡ ಬರಬಾರದು. ಕೆ.ಎಸ್.ಆರ್.ಟಿ.ಸಿ. ಈ ರಾಜ್ಯದ ಒಂದು ದೊಡ್ಡ ವೈರಿ ಎನ್ನುವ ಅಭಿಪ್ರಾಯವನ್ನು ನೀವು ವಿರೋಧ ಪಕ್ಷದವರು ಕೊಟ್ಟರೂ ಅದು ಸಾಧು ಅಲ್ಲ, ನಾವು ಕೊಟ್ಟರೂ ಸಾಧು ಅಲ್ಲ. ಆದ್ದರಿಂದ ದಯವಿಟ್ಟು ನಾವು ಇಲ್ಲಿಗೆ ಚರ್ಚೆಯನ್ನು ನಿಲ್ಲಿಸಿಬಿಡೋಣ. ತಾವು ಪ್ರತಿಭಟನೆಯನ್ನು ತೋರಿಸಿದ್ದೀರಿ. ನಾವು ನಿಮ್ಮ ಪ್ರತಿಭಟನೆಗೆ ಸ್ಪಂದಿಸಿದ್ದೇವೆ. ನಿಮ್ಮ ಪ್ರತಿಭಟನೆಯನ್ನು ಪ್ರತಿಷ್ಠೆಯ ಕಣವೆಂದು ನಮ್ಮ ಕಡೆಯವರು ಏನೂ ತಿಳಿದುಕೊಂಡಿಲ್ಲ. ಆದ್ದರಿಂದ ಈ ಸ್ಪಂದನ ಇದ್ದುಬಿಡಲಿ. Don't become too dry. ದಯವಿಟ್ಟು ಚರ್ಚೆಯನ್ನು ಇಲ್ಲಿಗೇ ನಿಲ್ಲಿಸಿಬಿಡೋಣ.

ಅಧ್ಯಕ್ಷರು:- ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಖ್ಯಮಂತ್ರಿಯವರೂ ಸಹಿತ ಇದರ ಬಗ್ಗೆ ತಮ್ಮ ಹೇಳಿಕೆಯನ್ನು ಹೇಳಿದ್ದಾರೆ. ದಯವಿಟ್ಟು ತಾವು ತಮ್ಮ ಅಸನಗಳನ್ನು ವಹಿಸಿಕೊಂಡು ಮುಂದಿನ ಕಾರ್ಯಕಲಾಪಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- (ಬಾವಿಯಿಂದ) ತಮ್ಮ ಬಗ್ಗೆ ನಮಗೆ ಗೌರವ ಇದೆ. ಸರ್ಕಾರ ಆಜ್ಞೆಯನ್ನು ಕೂಡಲೇ ಹಿಂತೆಗೆಯಕೊಂಡರೆ ನಾವು ಬಯಲಿದಕ್ಕೆ ಸಿದ್ಧರಿದ್ದೇವೆ. ಅವರು ತಮ್ಮ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಂತರ ಬೇಕಾದರೆ ಮಾತುಕತೆ ಮಾಡೋಣ.

ಶ್ರೀ ಟಿ.ಎಂ. ಮಂಜುನಾಥ್:- ಸರ್ಕಾರ ವಾಪಸ್ ತೆಗೆದುಕೊಂಡಿದೆ ಅಂದಮೇಲೆ ಎತ್ಡ್ರಾ ಮಾಡಿಕೊಂಡಹಾಗೆ ತಾನೆ?

ಶ್ರೀ ವಾಟಾಳ್ ನಾಗರಾಜ್:- (ಬಾವಿಯಿಂದ) ನೀವು ಇನ್ನೂ ನಿದ್ದೆ ಮಾಡಿಲ್ಲವೇನು?